**ದಿಃ24-11-2018** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ವಿ ಎ ಎಚ್ ವಕೀಲರಿಂದ **1(ಎ) (1)** ರ ಪರವಾಗಿ

ನಾನು ಮೂಲ ದಾವೆ ಸಂಖ್ಯೆ 43/2005 ನ್ನು ಶಿವಬಸು, ನೀಲಾ ಪಟ್ಟಣಶೆಟ್ಟಿ , ದೀಪ ಮಾಲಾ , ಕುಮಾರ ಸ್ವಾಮಿ ಸಾಲಿಮಠ , ಮಾಲತೇಶ ಇವರೆಲ್ಲರ ಮೇಲೆ ದಾಖಲಿಸಿದ್ದೆ. ಮೂಲ ದಾವೆ ಸಂಖ್ಯೆ 43/2005 ದೀಪ ಮಾಲಾ ಮತ್ತು ಕುಮಾರ ಸ್ವಾಮಿ ಸಾಲಿಮಠ ಇವರ ವಿರುದ್ಧ ದಾಖಲಿಸಿರಲಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಲೀಲಾ ಪಟ್ಟಣಶೆಟ್ಟಿ ಇವರು ಮರಣ ಹೊಂದಿದ ನಂತರ ಪುಷ್ಪಾ ಸಾಲಿಮಠ ಇವರನ್ನು ಅವರ ವಾರಸುದಾರರನ್ನಾಗಿ ಮಾಡಿದೆವು ಎಂದರೆ ಸರಿ. ಪುಷ್ಪಾ ಸಾಲಿಮಠ ಇವರು ಮರಣ ಹೊಂದಿದ ನಂತರ ಮೂಲ ದಾವೆ ನಂ. 43/2005 ರಲ್ಲಿ ಕುಮಾರ ಸ್ವಾಮಿ ಸಾಲಿಮಠ ಇವರನ್ನು ಅವರ ವಾರಸುದಾರರನ್ನಾಗಿ ಸೇರ್ಪಡೆ ಮಾಡಿದೆವು ಎಂದರೆ ಸರಿ. ಕುಮಾರ ಸ್ವಾಮಿ ಸಾಲಿಮಠ ಇವರಿಗೆ ಅವರ ಕೆಲಸದಿಂದ ಪ್ರತಿತಿಂಗಳು 40,000 ರೂ ವೇತನ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುಮಾರ ಸ್ವಾಮಿ ಸಾಲಿಮಠ ಇವರಿಗೆ ಪ್ರತಿತಿಂಗಳು 10,000 ರೂ ವೇತನವಿದೆ ಎಂದರೆ ಸರಿಯಲ್ಲ. ಅವರಿಗೆ ಪ್ರತಿತಿಂಗಳು 40,000 ರೂ ವೇತನ ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿಲ್ಲ. ಕುಮಾರ ಸ್ವಾಮಿ ಸಾಲಿಮಠ ಇವರು ಬಡ್ಡಿ ವ್ಯವಹಾರ ಮಾಡುತ್ತಾರೆ ಅದರಿಂದ ಲಕ್ಷಾಂತರ ರೂಪಾಯಿಗಳಿಸುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಅರ್ಜಿಯಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಕುಮಾರ ಸ್ವಾಮಿ ಸಾಲಿಮಠ ಇವರಿಗೆ ವಿನಾಕಾರಣ ತೊಂದರೆ ನೀಡುವ ಉದ್ದೇಶದಿಂದ ಅವರು ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ನಾನು ಹಾಜರಪಡಿಸಿದ ದಾಖಲೆಗಳಲ್ಲಿ ಏನು ಬರೆಯಲಾಗಿದೆ ಎಂದು ಓದಿ ತಿಳಿದುಕೊಂಡಿದ್ದೇನೆ. ನಾನು ಹಾಜರಪಡಿಸಿದ ನಿ.ಎ 1 ರಿಂದ 5 ದಾಖಲೆಗಳಲ್ಲಿ ಬರೆದಿರುವ ವಿಷಯಗಳು ನಿಜವಿರುತ್ತವೆ. ಈ ಪ್ರಕರಣದಲ್ಲಿ ಜಂಗಮ ವಸ್ತುಗಳ ವಾರೆಂಟನ್ನು  ಪಡೆದುಕೊಂಡಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿಯ ಸಾಲವನ್ನು  ಕುಮಾರ ಸ್ವಾಮಿ ಸಾಲಿಮಠ ಇವರು ನೇರವಾಗಿ ಪಡೆದಿಲ್ಲ ಆದ್ದರಿಂದ ಅವರನ್ನು ಬಂಧಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಕುಮಾರ ಸ್ವಾಮಿ ಸಾಲಿಮಠ ಇವರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಕುಮಾರ ಸ್ವಾಮಿ ಸಾಲಿಮಠ ಇವರ ವಿರುದ್ದ ಈ ಡಿಕ್ರಿಯನ್ನು ಅಮಲ ಬಜಾವಣೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.
ಹಾವೇರಿ.

ಎಕ್ಸೂ. ನಂಃ 47/2016
ಎ.ಡಬ್ಲ್ಯೂಃ 1

ಎಕ್ಸೂ. ನಂಃ 47/2016
ಎ.ಡಬ್ಲ್ಯೂಃ 1